ಶ್ರೀ ಕಡಿದಾಳ್ ಮಂಜಪ್ಪ.—ಕಲ್ಪಿಸಿದ್ದೇವೆ. ಆದರೆ ಇವರಲ್ಲಿ ಒಬ್ಬೊಬ್ಬರು ಒಂದೊಂದು ತರಹ ಕೆಲಸವನ್ನು ಅಪೇಕ್ಷೆಮಾಡುತ್ತಾರೆ. ಆದಕಾರಣ ಎಲ್ಲರಿಗೂ ಒಂದೇ ಉದ್ಯಮದಲ್ಲಿ ಅವಕಾಶನೀಡಲು ಆಗುವುದಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಮಲೆನಾಡಿನಲ್ಲಿ 20 ಸಾವಿರ ಎಕರೆ ಪ್ರದೇಶವನ್ನು ಮೀಸಲಾಗಿಟ್ಟಿರುವ ಕಡೆಗೆ, ಇವರು ಬಂದು ಅಲ್ಲಿ ನೆಲೆಸುವಂತೆ ಮಾಡುವುದಕ್ಕೆ ಸಾಧ್ಯವಿಲ್ಲವೇ?

Sri Kadidal MANJAPPA.–ಆಗುತ್ತದೆ. Unless our educated men realise that there is dignity in every labour it is not possible to rehabilitate them and solve this problem easily.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗಾದರೆ ಇವರಿಗೂ ಏನಾದರೂ ಜಮೀನು ಮುಂತಾದುವುಗಳನ್ನು ಮುಫತ್ತಾಗಿಕೊಡಬೇಕೆಂದು ಕೇಳಿದರೆ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಬರುವುದೇ ಇಲ್ಲ; ನೀವು ಹೇಳುವುದುಬಹಳ ಅಪರೂಪ.

ಶ್ರೀ ಎಚ್. ಎಸ್. ರುದ್ರಪ್ಪ.—ಬಂದರೆ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಊಹೆಯ ಪ್ರಶ್ನೆಯಾಯಿತು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈಗ ಕೆಲವು ಆಫೀಸುಗಳಲ್ಲಿ ರಿಟ್ರೆಂಚ್‌ಮೆಂಟ್ ಆಗಿ ಅನೇಕ ಜನರು ಕೆಲಸದಿಂದ ನಿವೃತ್ತರಾಗಿರುವುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಜನ ಆಗಿಲ್ಲ; ಕೆಲವರು ಆಗಿರಬಹುದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಸಾವಿರಾರು ಆಗಿದ್ದಾರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಸಾವಿರಾರು ಜನರು ಇಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅವರೆಲ್ಲಾ re-employ ಆಗುವುದಕ್ಕೆ ಏನು ಏರ್ಪಾಡು ಮಾಡಿರುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಹೇಳಿದೆನಲ್ಲಾ; ನಮ್ಮಲ್ಲಿ ಕೆಲಸಗಳೇನೋ ಇವೆ; ಆದರೆ ಅವರಿಗೆ ಒಂದು ವಿಧವಾದ ಕೆಲಸಗಳೇ ಬೇಕು. ಅವರಿಗೆ ಬೇಕಾಗಿರತಕ್ಕ ಕೆಲಸಗಳನ್ನೇ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಐದಾರು ವರ್ಷಗಳು ಕೆಲಸಮಾಡಿರುವವರನ್ನೂ ತಾವು ರಿಟ್ರೆಂಚ್‌ಮಾಡಿಕಳುಹಿಸಿದ್ದೀರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಐದಾರು ವರ್ಷ ಕೆಲಸ ಮಾಡುತ್ತಾ ಖಾಯಂ ಆಗಿರುವವರನ್ನು ಕಳುಹಿಸಿಲ್ಲ.

ಶ್ರೀ ಎಂ. ಲಿಂಗಣ್ಣ.—2,000 ಜನ ಮಿಲಿಟರಿ ಎಕ್ಸ್‌ಸರ್ವಿಸ್ ಸೈನಿಕರೂ ಇಲ್ಲಿ ಕೊಟ್ಟಿರುವ ನಂಬ್ಯೆಯಲ್ಲಿ ಸೇರಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ರಾಚಯ್ಯ.—ಮಿಲಿಟರಿ ರಿಟ್ರೆಂಡ್ ಆಫೀಸರುಗಳಿಗೆ, ಜಮೀನು ಕೊಡುವುದರಲ್ಲಿ, ಅವರಿಗೆ ಪ್ರೈಯಾರಿಟಿ ಕೊಡಬೇಕೆಂದು ಇತ್ತೀಚೆಗೆ ಸರ್ಕಾರಿ ಹುಕುಮ್‌ನೇನಾದರೂ ಹೊರಡಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥಾದ್ದೇನೂ ಇಲ್ಲ.

Contract for the Middle School Building at Heggere Village in Tumkur Taluk.

Q.—641. Sri T. N. MUDLAGIRI GOWDA (Kunigal).—

Will the Government be pleased to state:—

(*a*) whether a building for the Middle School at Heggere Village in Tumkur Taluk has been sanctioned;

(*b*) if so, in which year;

(*c*) the estimated amount for the said building;

(*d*) whether tenders have been called for;

(*e*) the names of persons who had given tenders;

(*f*) the name of person to whom the contract has been given?

A.—Sri Kadidal MANJAPPA (Minister for Revenue and Public Works).—

(*a*) Yes.
(*b*) In December 1952.
(*c*) Rs. 13,200.
(*d*) No.
(*e*) Does not arise in view of reply to question (*d*).
(*f*) Sri K. V. Puttagangiah, Tumkur.

ಶ್ರೀ ಟಿ. ಎನ್. ಮೂಡಲಗಿರಿಗೌಡ.–ಹೆಗ್ಗೆರೆ ಗ್ರಾಮಸ್ಥರು ಈ ಕಟ್ಟಡಕ್ಕಾಗಿ ಕಂಟ್ರಿಬ್ಯೂಷನ್ ಏನಾದರೂ ಕೊಟ್ಟಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಸರ್ಕಾರದ ಹಣ ಎಷ್ಟು, ಗ್ರಾಮಸ್ಥರು ಕೊಡಬೇಕಾದ ಹಣ ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಕೊಟ್ಟಿದ್ದರೆ ಹೇಳುತ್ತಿದ್ದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಎಷ್ಟು ಸಾವಿರ ರೂಪಾಯಿಗಳ ಮೇಲ್ಪಟ್ಟಿನ ಕೆಲಸವಾಗಿದ್ದರೆ ಜೆಂಡರ್ ಕರೆಯಬೇಕೆಂದಿದೆ? ಜೆಂಡರ್ ಕರೆಯುವುದರಲ್ಲಿ ಸರ್ಕಾರದ ನೀತಿಯೇನು?

ಶ್ರೀ ಕಡಿದಾಳ್ ಮಂಜಪ್ಪ.—ಅದು ಮೊತ್ತದ ಮೇಲೆ ಹೋಗುವುದಿಲ್ಲ. ಸಮಯ ಸಂದರ್ಭವನ್ನು ಅವಲಂಬಿಸುತ್ತದೆ. Speedy execution of the work and the reasonable rate quoted by the Piece-worker or the person who is given the work.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಎಷ್ಟು ಮೊತ್ತದ್ದು ಆಗಿದ್ದರೂ ಸರ್ಕಾರದವರು ಹೇಗೆ ಬೇಕಾದರೂ ಕೆಲಸವನ್ನು ನಡೆಸಬಹುದೇ?

Sri Kadidal MANJAPPA.—It is left to the discretion of the local engineers. They can entrust the work on piecemeal basis or on the basis of estimated repairs.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದನ್ನು ಪೀಸ್. ವರ್ಕ್ ಮೇಲೆ ಕೊಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟ್ ಆಗಿರುವ ರೇಟ್ ಮೇಲೆ ಕೊಟ್ಟಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದನ್ನು ಟೆಂಡರ್ ಕರೆದು ಕೊಟ್ಟಿದ್ದರೆ ಇನ್ನೂ ಸೇಕಡ 25, 30 ಕಡಮೆ ಬೀಳುತ್ತಿತ್ತೆಂಬುದು ತಮಗೆ ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಶ್ರೀ ಪುಟ್ಟ ಗಂಗಯ್ಯ ಎನ್ನುವವರಿಗೆ ಕೊಟ್ಟಿದೆಯೆಂದು ಹೇಳಿದ್ದೀರಿ. ಎಗ್ಸಿಕ್ಯೂಟಿವ್ ಎಂಜಿನಿಯರು ಹೇಳಿದ್ದರ ಮೇಲೆ ತಾನೆ ಅವರಿಗೆ ಕೊಟ್ಟಿದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದಕ್ಕೆ ಜನಗಳಿಂದ ಏನಾದರೂ ಟೆಂಡರು ಕರೆಯಲಿಲ್ಲವೆಂದು ಹೇಳಿ ಆಕ್ಷೇಪಣೆಗಳು ಸರ್ಕಾರಕ್ಕೆ ಬಂದಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ಬಂದಿದ್ದ ಹಾಗೆ ನೆನಪಿಲ್ಲ.

Water Supply in Kunigal Town

Q.—648. Sri T. N. MUDLAGIRI GOWDA (Kunigal).—

Will the Government be pleased to state :—

(*a*) the quantity of water supplied to Kunigal Town under the water supply scheme ;

(*b*) the population of Kunigal Town ;

(*c*) (i) the amount deposited in Government by the Municipality for borewells and tanks ;

(ii) when the amount was deposited ;

(*d*) when the borewell pump to Kunigal Municipality will be supplied ?

A.—Sri Kadidal MANJAPPA (Minister for Revenue and Public Works).—

(*a*) 22,000 gallons per day.

(*b*) 8,902 (as per Census of 1951).

(*c*) (i) Rs. 7,000 for sinking two additional bore-wells.

(ii) During December 1951 and April 1952.

(*d*) After about 8 to 9 months' time a drill can be sent to Kunigal as it is the nineteenth work in the priority list. Pumps will have to be supplied after the bore-wells are sunk and yield tested.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಕುಣಿಗಲ್ ಟೌನಿನಲ್ಲಿ ಒಳ್ಳೆಯ ನೀರು ಸಿಕ್ಕದೆ ಜನರಿಗೆ ಮಲೇರಿಯಾ ಹೆಚ್ಚಾಗಿ ತಗಲಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಲೇರಿಯಾ ಹೆಚ್ಚಾಗಿ ಬಂದಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ ; ನೀರಿನ ಅಭಾವವಿದೆಯೆಂದು ಗೊತ್ತಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎಲ್. ಎಸ್. ಜಿ. ಮಂತ್ರಿಗಳು ಕುಣಿಗಲ್ ಟೌನನ್ನು inspection ಮಾಡುವ ಕಾಲದಲ್ಲಿ 20—30 ಕಡೆ ಸಾಲುಗಟ್ಟಲೆ ಪಾತ್ರೆಗಳನ್ನಿಟ್ಟುಕೊಂಡು ನೀರಿಗೆ ತೊಂದರೆಪಡುತ್ತಿರುವುದನ್ನು ಕಂಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಪ್ರೈಯಾರಿಟಿ ಲಿಸ್ಟಿನಲ್ಲಿ ಇದು 19ನೆಯದು ಎಂದು ಹೇಳಿದ್ದೀರಿ. ಇಲ್ಲಿನ ನೀರಿನ ವ್ಯವಸ್ಥೆಗೆ ಪ್ರೈಯಾರಿಟಿ ಕೊಟ್ಟ ಡ್ರಿಲಿಂಗ್ ಮೆಷಿನನ್ನು ಬೇಗ ತರಿಸಿಕೊಡುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲೇ ಹೇಳಿದ್ದೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇನ್ನು 8—9 ತಿಂಗಳಾಗುತ್ತದೆಂದು ಹೇಳಿದ್ದೀರಿ. ಇನ್ನೂ ಜಾಗ್ರತೆ ತರಿಸಿಕೊಡುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆ ಕುಣಿಗಲ್ ತಾಲ್ಲೂಕಿಗೆ ಡ್ರಿಲಿಂಗ್ ಮೆಷೀನನ್ನು ಕಳುಹಿಸಿ ಕೊಡುತ್ತೇವೆ.

Restoration of Kembalalu tank in Kunigal Taluk.

Q.—650. Sri T. N. MUDLAGIRI GOWDA (Kunigal).—

Will the Government be pleased to state :—

(*a*) the number of minor and major tanks in Gulur and Hebbur Hoblis of Tumkur Taluk and Kottagere and Kasaba Hobly of Kunigal Taluk ;

(*b*) the total extent of the atchkat behind all these tanks ;

(*c*) the names of tanks restored during the last five years ;

(*d*) the capacity of Kembalalu Tank ; the extent of land under cultivation in the atchkat of this Tank ;

(*e*) since how many years the raiyats under this tank are requesting Government to restore this tank in view of the fact that it is being silted with sand ?